# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.27701/2023

| | | |
|---|---|---|
| ಫಿರ್ಯಾದಿದಾರರು | : | ರಾಜ್ಯ ಸರ್ಕಾರದ ಪರವಾಗಿ ದೇವರ ಜೀವನಹಳ್ಳಿ ಆರಕ್ಷಕ ಠಾಣೆ |

**- ವಿರುದ್ಧ -**

| | | |
|---|---|---|
| ಆರೋಪಿ | : | ಶ್ರೀ ಆಸಿಫ್ ಖಾನ್,<br>ಬಿನ್. ನಸೀರ್ ಖಾನ್, 25 ವರ್ಷ<br>ವಾಸಃ ನಂ.34, 1ನೇ ಕ್ರಾಸ್,<br>ವಿ.ವಿ. ಲೇಔಟ್, ಗುಟ್ಟಾಲ ಕಾಲೋನಿ,<br>ಮಂಡ್ಯ. |

## ದೋಷಾರೋಪಣೆ

ಶ್ರೀ. **ಸೋಮನಾಥ, ಬಿ.ಎ.(ಲಾ), ಎಲ್.ಎಲ್.ಬಿ.,** 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿದ್ದೇನೆ.

ಮೊದಲನೇಯದಾಗಿ, ದಿನಾಂಕ 24-09-2022 ರಂದು ಸಾಕ್ಷಿ-1 ರವರ ಕಂಪನಿಗೆ ಆರೋಪಿಯಾದ ನೀವು ಶೇಖ್ ಬಬ್ಜಾನ್ ಎಂಬಾತನ ದಾಖಲಾತಿಗಳನ್ನು ನೀಡಿ ತಾನೇ ಶೇಖ್ ಬಬ್ಜಾನ್ ಎಂದು ಡೆಲವರಿ ಬಾಯ್ ಕೆಲಸಕ್ಕೆ ಸೇರಿದ್ದು, ಕಂಪನಿಯೂ ಬೆಂಗಳೂರು ನಗರದ ಡಿ.ಜೆ. ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕನಕನಗರದಲ್ಲಿರುವ ಫ್ಲಿಪ್ ಕಾರ್ಟ್ ಹಬ್ ಗೆ ದಿನಾಂಕ 25.09.2022 ರಂದು ಆರೋಪಿಯಾದ ನಿಮ್ಮನ್ನು ಕೆಲಸಕ್ಕೆ ಕಳುಹಿಸಿದಾಗ ಆರೋಪಿಯಾದ ನೀವು ಅ ದಿನ ಸದರಿ ಹಬ್ ನಿಂದ 6 ವಸ್ತುಗಳನ್ನು ಡೆಲವರಿ ಮಾಡಿ ಬಂದ ಹಣವನ್ನು ಪಾವತಿ ಮಾಡಿದ್ದು, ನಂತರ ದಿನಾಂಕ 26.09.2022 ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ಆರೋಪಿಯಾದ ನೀವು ಅದೇ ಹಬ್ ನಲ್ಲಿ ಸುಮಾರು 4,07,780/- ರೂ. ಬೆಲೆ ಬಾಳುವ 61 ವಸ್ತುಗಳನ್ನು ಗ್ರಾಹಕರಿಗೆ ಡೆಲವರಿ ಮಾಡುವುದಾಗಿ

ತೆಗೆದುಕೊಂಡು ಹೋದವನು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಆ ವಸ್ತುಗಳನ್ನು ಡೆಲವರಿ ಮಾಡದೆ ಕಂಪನಿಗೂ ವಾಪಸ್ ಕೊಡದೇ ಕಂಪನಿಗೆ ಅಪ್ರಮಾಣಿಕವಾಗಿ ಅಪರಾಧಿಕ ನಂಬಿಕೆ ದ್ರೋಹವೆಸಗಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.406 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ವಿಳಾಸದಲ್ಲಿ ಆರೋಪಿಯಾದ ನೀವು ಹಬ್ ನಲ್ಲಿ ಸುಮಾರು 4,07,780/- ರೂ. ಬೆಲೆ ಬಾಳುವ 61 ವಸ್ತುಗಳನ್ನು ಗ್ರಾಹಕರಿಗೆ ಡೆಲವರಿ ಮಾಡುವುದಾಗಿ ತೆಗೆದುಕೊಂಡು ಹೋದವನು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಆ ವಸ್ತುಗಳನ್ನು ಡೆಲವರಿ ಮಾಡದೆ ಕಂಪನಿಗೂ ವಾಪಸ್ ಕೊಡದೇ ಕಂಪನಿಗೆ ಅಪ್ರಮಾಣಿಕವಾಗಿ ನಂಬಿಕೆ ದ್ರೋಹವೆಸಗಿ ಬೆಲೆ ಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮೋಸ ಮಾಡಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 03.11.2025
ಬೆಂಗಳೂರು.

**(ಸೋಮನಾಥ)**
4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.27701/2023

| | | |
|---|---|---|
| ಫಿರ್ಯಾದಿದಾರರು | : | ರಾಜ್ಯ ಸರ್ಕಾರದ ಪರವಾಗಿ ದೇವರ ಜೀವನಹಳ್ಳಿ ಆರಕ್ಷಕ ಠಾಣೆ |
| | | **- ವಿರುದ್ಧ -** |
| ಆರೋಪಿ | : | ಶ್ರೀ ಆಸಿಫ್ ಖಾನ್ |

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 03.11.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.